SRI H. M. CHANNABASAPPA —Some of them are da coits and some of them are convicts. One Bhagath is a convict. Another Syed Hussain was imprisoned for 8 months and the other is a prisoner under trial.

SRI B. B. SAYANAK.—May I know whether all these prisoners are from U.P ?

SRI H. M. CHANNABASAPPA.—I cannot say from which place they have come from.

SRI B. B. SAYANAK —All those persons when they were arrested were possessing pistols and the life of the S P. was in danger.

SRI H. M. CHANNABASAPPA.—Madam Speaker, this is a question regarding escape from jail. If the Hon'ble Member were to ask several questions which are not connected to the main as to whether they were having pistols and other things, I don't have information for all those things.

SRI M. S. KRISHNAN.—With due respect to the Hon'ble Minister. when the Member is asking facts connected to it, it is not answered,

SRI B. B. SAYANAK.—They are all from U.P. and they are graduates.

SRI H. M. CHANNABASAPPA.—That information is not before me as to which place they belong and their antecedents etc.

SRI B. B. SAYANAK.—Even the Superintendent knows all these things. Then why that information was not made available.

SRI H. M. CHANNABASAPPA.—This only refers to the escape from the prison. I cannot tell the entire history of the case.

SRI B B. SAYANAK.—Why Mr. Punekar, a compounder was suspended ?

SRI H. M. CHANNABASAPPA.—All those who were suspected to have assisted directly or indirectly have been suspended.

Agricultural Joint Farming Society at Kumbeshwara Colony.

116. SRI K. SIDDAIAH, (Santhemarahally).—Will the Minister for Revenue be pleased to state:

(*a*) whether it is a fact that the object of establishing the Agricultural Joint Farming Society at Kumbeshwara Colony in Chamarajanagar Taluk was to settle the destitutes or the landless persons ;

(*b*) if so, whether the beneficiaries of that Colony are all landless *bonafide* agriculturists ;

(c) whether it has come to the notice of Government that some of the beneficiaries of that colony were granted land in Homma Tank bed in Chamarajanagar Taluk ;

(d) whether it has also come to the notice of Government that this grant of land has given rise to several serious quarrels, dissentions, house burning and court litigations among the Harijan residents of Alur, Chamarajanagar Taluk ;

(e) if so, whether the Government intend to take appropriate action to set right the dispute among Alur Harijans and also make enquiries regarding eligibility of the beneficiaries of Kumbeshwara Colony ?

SRI N, HUTCHAMASTHY GOWDA (Minister for Revenue).—

(a) Yes.

(b) Yes.

(c) Yes.

(d) Yes.

(e) Action is being taken to restrain both the parties from entering the spot until further orders and to evict unauthorised occupants.

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ ಚಾಮರಾಜನಗರ ತಾಲ್ಲೂಕಿನ ಕುಂಬೇಶ್ವರ ಕಾಲೋನಿಯಲ್ಲಿ ತಾವು ಜಮೀನು ಇಲ್ಲದವರಿಗೆ ಜಮೀನು ಕೊಟ್ಟಿದ್ದೀವೆಂದು ಹೇಳಿದ್ದೀರಿ. ಆದರೆ ಅಲ್ಲಿ ಜಮೀನು ಉಳ್ಳವರಿಗೂ ಜಮೀನು ಕೊಟ್ಟಿರುವ ವಿಚಾರ ತಮ್ಮ ಗಮನಕ್ಕೆ ಬಂದಿರುತ್ತದೆಯೇ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಜಮೀನು ಇಲ್ಲದವರಿಗೇನೆ ಜಮೀನನ್ನು ಕೊಟ್ಟಿರತಕ್ಕಂಥದ್ದು. ಇಲ್ಲ ಮೊದಲು ಕೊಟ್ಟಿರುವುದು ಎಂದರೆ 8 ಎಕರೆ ಜಮೀನನ್ನು ಕೊಟ್ಟಿದಂಥ ಸ್ಥಳದಲ್ಲಯೇ ಎಂಟು ಜನಕ್ಕೆ ಒಬ್ಬೊಬ್ಬರಿಗೆ ಒಂದೊಂದು ಎಕರೆಯಂತೆ ಕೊಟ್ಟಿರುತ್ತದೆ. ಈ ಎಂಟು ಜನರ ಜೊತೆಯಲ್ಲಿ 80 ಜನರು ಅಕ್ರಮವಾಗಿ ಉಳುಮೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳುವುದಾದರೆ, ಅದು ಬೇರೆ ವಿಧವಾದ ಜಮೀನಾಗಿದ್ದು 100 ಜನ ಜಮೀನಿನಲ್ಲಿದ್ದಾರೆ.

ಶ್ರೀ ಕೆ. ಸಿದ್ದಯ್ಯ.—ಇದರಲ್ಲಿ 8 ಜನಕ್ಕೆ ತಾವು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಅರ್ಜಿ ಇಲ್ಲದೆ 8 ಜನಗಳಿಗೆ ಕೊಟ್ಟಿದ್ದೀರಿ ಎನ್ನುವುದನ್ನು ತಮ್ಮ ಗಮನಕ್ಕೆ ಬಂದಿದೆಯೆ? ಆಲೂರಿನ ಕರೆ ಅಂಗಳದಲ್ಲಿ ಜಮೀನು ಕೊಟ್ಟಿರುವುದರ ಹೈಕ ಬಗರ್ ಹುಕ್ಕುಂ ಮೇರೆ ಮಾಡಿಕೊಂಡಿರುತ್ತಾರೆ. 8 ಜನರೂ ಅರ್ಜಿ ಇಲ್ಲದೆ ಕೊಟ್ಟಿರುತ್ತಾರೆಂದು ದೂರು ಇರುವುದು ತಮ್ಮ ಗಮನಕ್ಕೆ ಬಂದಿರುತ್ತದೆಯೇ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅದು 1956ನೇ ಇಸವಿಯಲ್ಲಿ ಜುಲೈ 6ನೇ ತಾರೀಖು ಮುಂಜೂರಾತಿಯಾಗಿರತಕ್ಕಂಥದ್ದು ಇರುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಎಕರೆ ಪ್ರಕಾರವಾಗಿ, ಅದು ಅಭಾವಕ್ಕೆ ಒಳಗಾದವರಿಗೆ ಕೊಟ್ಟಿರುತ್ತದೆ ಎನ್ನುವುದು ವಿಷಯವಾಗಿರುತ್ತದೆ. ಈಗ 20 ವರ್ಷಗಳಾದ ಮೇರೆ ನನ್ನನ್ನು ಕೇಳುತ್ತಿರುವುದರಿಂದ ಸಾಕಾದಷ್ಟು ಕಾಗದಪತ್ರಗಳು, ದಾಖಲಾತಿಗಳು ಸಿಕ್ಕುತ್ತಿಲ್ಲ.

ಶ್ರೀ ಕೆ. ಸಿದ್ದಯ್ಯ.—ಇದು ಎಷ್ಟೋ ದಿವಸಗಳಾಗಿದ್ದರೂ ಕೂಡ ರೆಕಾರ್ಡ್ಸ್ ಇದ್ದೇ ಇರುತ್ತದೆ. ಆ ರೀತಿ ಕೊಟ್ಟಿಲ್ಲವೆಂದು ಹೇಳುತ್ತೀರಿ. ಅರ್ಜಿ ಇಲ್ಲದೆಯೇ ತಮಗೆ ಬೇಕು ಬೇಕಾದವರಿಗೆ ಕೊಟ್ಟಿರುತ್ತಾರೆ. ಅರ್ಜಿಯನ್ನು ಹಾಕಿದವರಿಗೆ ಕೊಟ್ಟಿರುವುದಿಲ್ಲ. ಆದ್ದರಿಂದ ಕ್ರಿಮಿನಲ್ ಕೇಸ್ ಹತ್ತಾರು ಆಗಿರುತ್ತದೆ ಇದನ್ನು ಈಗಲೂ ನೋಡಿ ಲ್ಯಾಂಡ್‌ಲೆಸ್ ಪೀಪಲ್‌ಗೆ ಕೊಡುವುದಕ್ಕೆ ತಾವು ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —8 ಜನಕ್ಕೆ ಮಾತ್ರ ಲೀಸ್ ಮೇಲೆ ಕೊಟ್ಟಿರುವುದು. ಈ ಲೀಸ್ ಪಾರ್ಟಿಯ ಜೊತೆಗೆ 80 ಜನ ಅಕ್ರಮ ಸ್ವಾಧೀನದಲ್ಲಿದೆ ಎಂದು ತಿಳಿದು ಬಂದಿರುತ್ತದೆ ನಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋಗಿ ನೋಡಿದಾಗ 88 ಜನರು ಮೂರುವರೆ ಗುಂಟೆಯಲ್ಲಿ ಅನ. ಆಥರೈಸ್ಡ್ ಆಗಿ ಜಮೀನು ಸ್ವಾಧೀನದಲ್ಲಿಟ್ಟು ಕೊಂಡಿರುವುದು ವಾಸ್ತವವಾಗಿ ಕಂಡುಬಂದುದರಿಂದ ಆದನ್ನು ತಪ್ಪಿಸುವುದಕ್ಕೋಸ್ಕರವಾಗಿ ಈ 88 ಜನರೊಂದಿಗೆ 12 ಜನರನ್ನು ಸೇರಿಸಿ ಒಟ್ಟು ನೂರು ಜನರಿಗೆ 400 ಎಕರೆ ಜಮೀನನ್ನು ಹಂಚಿರುವುದರ ಪೈಕಿ ಒಂದು ಎಕರೆಯನ್ನು ಲೀಸ್ ಮಾಡಿರುವುದು ಪ್ರಾಭಾವಕ್ಕೆ ಒಳಗಾಗಿ ಕೊಟ್ಟಿದ್ದೀರೆಂದು ಮಾನ್ಯ ಸದಸ್ಯರು ಹೇಳಿರುವುದರ ಬಗ್ಗೆ, ಜಮೀನು ಇಷ್ಟು ಇದೆ ಎನ್ನುವುದನ್ನು ಲೆಕ್ಕ ತೆಗೆದುಕೊಂಡರೂ ಕೂಡ, ಜಮೀನು ಇಷ್ಟೇ ಇದೆ ಎಂದು ವಿಚಾರ ತಿಳಿದು ಹೇಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈಗ ತಾವು ಹೇಳಿರುವ ಪ್ರಕಾರ 8 ಜನರಿಗೆ ಮೊದಲೇ ಜಮೀನು ಕೊಟ್ಟಿದ್ದು, 80 ಜನರು ಅಕ್ರಮ ಸ್ವಾಧೀನ ಮಾಡಿದ್ದಾರೆ. ಒಬ್ಬರಿಗೆ 4 ಎಕರೆ ಪ್ರಕಾರ ನೂರು ಜನಕ್ಕೆ ಕೊಟ್ಟಿದ್ದೀರಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಒಬ್ಬೊಬ್ಬರಿಗೆ ಒಂದು ಎಕರೆ ಪ್ರಕಾರ 8 ಜನರಿಗೆ 8 ಎಕರೆ ಜಮೀನನ್ನು ಕೊಟ್ಟಿದ್ದೇವೆ. ಇನ್ನು 80 ಜನರು ಅಕ್ರಮ ಸ್ವಾಧೀನ ಮಾಡಿ, ಅವರ ಜೊತೆಗೆ 8 ಜನರು ಸೇರಿ ಒಟ್ಟು 88 ಜನರು ಅದನ್ನು 3½ ಗುಂಟೆ ಪ್ರಕಾರ ಅನುಭವಿಸುತ್ತಿದ್ದರು. ಇವರಿಗೆ 3½ ಗುಂಟೆ ಜಮೀನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ತಿಳಿದು ಬೇರೆ ಕಡೆ ಹೆಗ್ಗಡದೇವನಕೋಟೆಯಲ್ಲಿ ಹೊಮ್ಮ ಎಂಬ ಹಳ್ಳಿಯಲ್ಲಿ ಸರ್ವೆ ನಂಬರ್ 51ರಲ್ಲಿ ಆ 8 ಜನರು, 80 ಜನರು, ಇವರ ಜೊತೆಗೆ ಇನ್ನೂ 12 ಜನರನ್ನು ಸೇರಿಸಿ ನೂರಕ್ಕೆ ಒಬ್ಬರಿಗೆ 4 ಎಕರೆ ಪ್ರಕಾರ 400 ಎಕರೆ ಜಮೀನನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಾವು ಹೇಳಿದ್ದೀರಿ 1956ನೇ ಇಸವಿ ಜುಲೈನಲ್ಲಿ ಜಮೀನು ಲೀಸ್ ಪ್ರಕಾರ ಸ್ಯಾಂಕ್ಷನ್ ಆಯಿತು ಎಂದು ಈಗ ಜಮೀನನ್ನು ಟ್ಯಾಂಕ್‌ಬೆಡ್‌ನಲ್ಲಿ ಯಾರು ಅಕ್ರಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೋ ಅವರಿಗೆ ಕೊಟ್ಟಿದೆ ಎಂದು ತಾವು ಹೇಳಿದಿರಿ. ಇದು 194ನೇ ತಿದ್ದುಪಡಿಯ ಪ್ರಕಾರ ಕಾನೂನಿಗೆ ತದ್ವಿರುದ್ಧವಾಗುವುದಿಲ್ಲವೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ 8 ಎಕರೆ ವಿಷಯದಲ್ಲಿ ಇರುವ ವ್ಯಾಜ್ಯ ಇನ್ನೂ ಬಗೆ ಹರಿದಿಲ್ಲ. ಈ ವ್ಯಾಜ್ಯ ಕೋರ್ಟ್ ಮುಂದೆ ಇದೆ. ಆದನ್ನು ಅಕ್ರಮ ಸ್ವಾಧೀನ ಮಾಡಿಕೊಂಡಿರುವುದರಿಂದ ಬಿಡಿಸಬೇಕಾದರೆ, ಲೀಸವನ್ನು ವಜಾ ಮಾಡಬೇಕಾದರೆ ಆ ಪ್ರಶ್ನೆ ಸರ್ಕಾರದ ಮುಂದೆ ಇದೆ. ಈ ಮಧ್ಯೆ ಅವರೆಲ್ಲರಿಗೂ 4 ಎಕರೆಯಂತೆ ಬೇರೆ ಕಡೆ ಜಮೀನು ಕೊಟ್ಟಿದ್ದಾರೆ.

ಶ್ರೀ ಕೆ. ಸಿದ್ದಯ್ಯ.—ಆಲೂರಿನಲ್ಲಿ ಈ 8 ಜನರ ಜೊತೆಗೆ 8 ಜನಕ್ಕೆ ಕಂಬೇಶ್ವರ ಕಾಲೋನಿಯಲ್ಲಿ 4 ಎಕರೆಯಂತೆ ಪೆಟ್ ಲ್ಯಾಂಡ್ಸ್ ಕೊಟ್ಟಿದ್ದೀರಿ. ಈ ರೀತಿ ಕೊಟ್ಟಿರತಕ್ಕಂಥಾದ್ದು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗೆ ವಿರುದ್ಧವಾಗಿದೆ. ಲ್ಯಾಂಡ್‌ಲೆಸ್ ಪೀಪಲ್ಸ್‌ಗೆ ಕೊಡದೇ ಅವರಿಗೆ ಏತಕ್ಕೆ ಕೊಟ್ಟಿರಿ? ಕೆಲವರಿಗೆ ಸಾಗುವಳಿ ಬೇಟಿ ಕೊಟ್ಟಿರುವುದನ್ನು ಬದಲಾಯಿಸಿದ್ದೀರಿ. ಈ ಬಗ್ಗೆ ಎನ್‌ಕ್ವೈರಿ ಮಾಡುಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು 1968ನೇ ಇಸವಿಯಲ್ಲಿ ಕೊಟ್ಟಿರುವುದು ಇದೆ. ಇದನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಈ 4 ಎಕರೆ ಜಮೀನನ್ನು ಕೊಡುವುದಕ್ಕಿಂತ ಮುಂಚೆ ಅಲ್ಲಿ ಭೂಮಿ ಏನಿತ್ತು, ಆ ಭೂಮಿಯನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಮಂಜೂರು ಮಾಡಿದ್ದಾರೆಯೇ ಎಂಬುದನ್ನು ತಿಳಿದುಕೊಂಡು ಅನಂತರ ಮುಂದಿನ ಕ್ರಮವನ್ನು ತೆಗೆದು

ಕೊಳ್ಳುತ್ತೇನೆ. ಇದರ ಜೊತೆಗೆ 1968ನೇ ಇಸವಿಯಲ್ಲಿ ರ್ಯಾಂಡ್ ಗ್ರಾಂಟ್ ರೂರ್ಸ್ ಜಾರಿಯಲ್ಲಿ ಇರಲಿಲ್ಲ. ಅದ್ದರಿಂದ ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ. ಡೆಪ್ಯುಟಿ ಕಮಿಷನರ್ ಅವರು 21ನೇ ಸೆಪ್ಟಂಬರ್ 1976ರಲ್ಲಿ ಅಲ್ಲಿಯ ಸ್ಥಳಕ್ಕೆ ಹೋಗಿ ಆಪರಾಗಳಿಗೆರ್ನಾ ಸಮಾಧಾನವಾಗುವ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಈ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

Release of land from Forest Department to Revenue Department in Kundur Village.

126. SRI G. PUTTASWAMY (Mudigere).—Will the Minister of State for Forests be pleased to state:

the extent of land with Survey numbers has been released by the Forest Department to Revenue Department in Kundur Village in Mudigere taluk and when they were released?

SRI H. C. SRIKANTAIAH (Minister of State for Forests).—

Government have ordered the transfer of 550 acres in 5 survey numbers of Kundur village from Forest Department to Revenue Department. The transfer has still not been effected.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಉತ್ತರದಲ್ಲಿ ಈ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಕುಂದೂರು ಗ್ರಾಮದ 5 ಸರ್ವೆ ನಂಬರುಗಳಲ್ಲಿ 550 ಎಕರೆಗಳನ್ನು ವರ್ಗಾವಣೆ ಮಾಡಲು ಸರ್ಕಾರದವರು ಆದೇಶ ನೀಡಿದ್ದಾರೆ, ಈ ವರ್ಗಾವಣೆ ಮಾಡುವುದನ್ನು ಇನ್ನೂ ಬಾರಿಗೊಳಿಸಿಲ್ಲ ಎಂದು ಹೇಳಿದ್ದೀರಿ. ಸರ್ವೆ ನಂಬರ್ 201ರಲ್ಲಿ ಈಗಾಗಲೇ ಒಂದೆರಡು ಎಕರೆ ಜಮೀನು ಇಲ್ಲದೆ ಬಡರೈತರು ಸಾಗುವಳಿ ಮಾಡಿದ್ದಾರೆ. ಅದಕ್ಕೆ ಬದಲಾಗಿ ಸರ್ವೆ ನಂಬರ್ 5ರಲ್ಲಿ ಪ್ರಪೋಸ್ ಮಾಡಿದ್ದೀರಿ. ಸರ್ವೆ ನಂಬರ್ 5ರಲ್ಲಿ ಸಾಗುವಳಿ ಮಾಡಿದ್ದಾರೆ ಆದ್ದರಿಂದ ಸರ್ವೆ ನಂಬರ್ 5 ಮತ್ತು 201 ಅನ್ನು ದಯವಿಟ್ಟು ರೀಲಸ್ ಮಾಡಿಕೊಡುತ್ತೀರಾ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ ಇದರಲ್ಲಿ 550 ಎಕರೆಯನ್ನು ವರ್ಗಾವಣೆ ಮಾಡಬೇಕೆಂದು ತೀರ್ಮಾನ ಮಾಡಿದೆವು. ಸರ್ವೆ ನಂಬರ್ 82ರಲ್ಲಿ 150 ಎಕರೆ, ಸರ್ವೆ ನಂಬರ್ 235ರಲ್ಲಿ 100 ಎಕರೆ ಮತ್ತು ಸರ್ವೆ ನಂಬರ್ 201, 202, 205ರಲ್ಲಿ ತಲಾ 100 ಎಕರೆ ಇದೆ. ಇದರಲ್ಲಿ ಸರ್ವೆ ನಂಬರ್ 82 ಮತ್ತು 235ರಲ್ಲಿ ನಮಗೆ ಟ್ರೀಕ್ ಪ್ಲಾಂಟೇಷನ್ ಹಾಕಲು ಸ್ವಳ ಅನುಕೂಲವಾಗಿರುವುದರಿಂದ ಅದನ್ನು ಪುನಃ ಫಾರೆಸ್ಟ್ ಇಲಾಖೆಗೆ ವಾಪಸ್ ಕೊಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಬರೆದಿದ್ದೇವೆ. ಈ ಸರ್ವೆ ನಂಬರ್ 201, 202 ಮತ್ತು 205 ಅನ್ನು ರೀಲಸ್ ಮಾಡಿ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವ ಸರ್ವೆ ನಂಬರ್‌ನಲ್ಲಿ ಜನರು ಒಂದೆರಡು ಎಕರೆ ಸಾಗುವಳಿ ಮಾಡಿದ್ದಾರೆ ಅಷ್ಟು ಮಾತ್ರ ಅವರಿಗೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ವೆ ನಂಬರ 201, 202 ಮತ್ತು 205 ತಲಾ ನೂರು ಎಕರೆಯಂತೆ ಒಟ್ಟು 300 ಎಕರೆಯನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಇದು ಅವರಿಗೆ ಒಟ್ಟು ಪಚಾರವಾಗಿದೆ.